ವಿಷಯ (ಅ) ಬೆಂಗಳೂರಿನ ಕಾವಲ್ ಭೈರಸಂದ್ರದಲ್ಲಿರುವ ಸರ್ಕಾರಿ ವಸತಿ ಗೃಹಗಳ 'ಸಿ' ಚರ್ಚೆ ಮನೆಗಳಿಗೆ ವಿಧಿಸುತ್ತಿರುವ ನೀರಿನ ದರದ ಬಗ್ಗೆ

ಶ್ರೀಯು. ಬಿ. ಬಣಕಾರ್ (ಹಿರೇಕೆರೂರು):- ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಕಾವಲ್ಭೈರಸಂದ್ರದಲ್ಲಿರುವ ಸರ್ಕಾರಿ ವಸತಿ ಗೃಹದ 'ಸಿ' ದರ್ಜೆ ಮನೆಗಳಿಗೆ ವಿಧಿಸುತ್ತಿರುವ ನೀರಿನ ದರವು ಜಾಸ್ತಿ ಇರುವುದರಿಂದ ಅಲ್ಲಿನ ನಿವಾಸಿಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ:- (ಲೋಕೋಪಯೋಗಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ವ್ಯಕ್ತಿಗಳು ಹೆಚ್ಚಿನ ನೀರನ್ನು ಉಪಯೋಗ ಮಾಡುತ್ತಾರೆ. ಆದರೆ (ಸಿ) ಮಾದರಿಯ ಗೃಹಗಳಲ್ಲಿರುವ ಮಧ್ಯಮವರ್ಗದ ಜನರು ಅಲ್ಲಿ ಅವರು ಕಡಿಮೆ ನೀರನ್ನು ಬಳಸಿದರೂ ಸಹ ಎಲ್ಲರಿಗೂ ಈಕ್ವಲ್ ಟ್ರೀಟ್‌ಮೆಂಟ್ ಕೊಡುತ್ತಾರೆ. ಎಲ್ಲರಿಗೂ ಸಮಾನವಾಗಿ ಬೆಲೆ ಕೊಡುತ್ತಾರೆ. ಹೀಗಾಗಿ ಹೆಚ್ಚಿಗೆ ನೀರು ಬಳಸುವಂಥ ಬಂಗ್ಲೆ ಮತ್ತು ಡುಪ್ಲೆಕ್ಸ್ ಬಂಗ್ಲೆ ಮಾದರಿಯವರಿಗೆ ಕಡಿಮೆ ಬಿಲ್ ಬರುತ್ತದೆ. 'ಸಿ' ಮಾದರಿಯ ಜನರಿಗೆ ಕಡಿಮೆ ನೀರು ಉಪಯೋಗ ಮಾಡಿದರೂ ಹೆಚ್ಚಿಗೆ ಬಿಲ್ ಬರುತ್ತದೆ. ಹೀಗಾಗಿ ಅಸಮಾನತೆ ಇರುವುದರಿಂದ ಇಲ್ಲಿ ಸಿ ಮಾದರಿಯ ಗೃಹಗಳಲ್ಲಿರತಕ್ಕ ವ್ಯಕ್ತಿಗಳಿಗೆ ಬಹಳ ಅನ್ಯಾಯ ಆಗುತ್ತಾ ಇದೆ. ಮತ್ತು ಅವರು ಎಷ್ಟು ನೀರು ಬಳಕೆ ಮಾಡುತ್ತಾರೋ ಅದಕ್ಕೆ ಹೆಚ್ಚಿನ ದರ ಅಳವಡಿಕೆ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಸರ್ಕಾರ ದಯವಿಟ್ಟು ಇದರ ಬಗ್ಗೆ ಗಮನ ಹರಿಸಿ ಮಾನ್ಯ ಸಚಿವರು

'ಸಿ' ವರ್ಗದ ಗೃಹಗಳಲ್ಲಿ ವಾಸವಾಗಿರುವವರಿಗೆ ಪ್ರತ್ಯೇಕವಾದ ಮೀಟರ್ ಅಳವಡಿಸಲಿ. ಅವರು ಎಷ್ಟು ನೀರು ಬಳಕೆ ಮಾಡುತ್ತಾರೋ ಅಷ್ಟು ಮಾಡಲಿ. ಆದರೆ ಎಲ್ಲರಿಗೂ ಸಮನಾಗಿ ಹಂಚುವುದು ಬೇಡ. ಅದಕ್ಕೆ ಪ್ರತ್ಯೇಕ ಮೀಟರ್ ಹಾಕುವ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಗಮನ ಹರಿಸಬೇಕು. ಮತ್ತು ದರವನ್ನು ಇಳಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ:- ಸನ್ಮಾನ್ಯ ಉಪಾಧ್ಯಕ್ಷರೆ, ನೀರು ಬಳಕೆಯ ಮೇಲೆ 'ಸಿ' ಮಾದರಿಯಲ್ಲಿ ಕೇವಲ 16 ವಸತಿಗೃಹಗಳಿವೆ. ಅವರು ಪ್ರಶ್ನೆ ಕೇಳಿದಾಗ ಒಂದು ಮಾತನ್ನು ಹೇಳಿದ್ದಾರೆ. ಹಾಲಿನ ದರವನ್ನು ನೀರಿಗೆ ವಿಧಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಇಲ್ಲಿ ಮೂರೂವರೆ ರೂಪಾಯಿಗೆ ಒಂದು ಸಾವಿರ ಲೀಟರ್ ನೀರು ಬಳಕೆ ಮಾಡಬಹುದು. ಪ್ರತಿಯೊಂದು ಮನೆಯಿಂದ ಸರಾಸರಿ 50ರಿಂದ 60 ರೂಪಾಯಿ ವಸೂಲು ಮಾಡುತ್ತಿದ್ದೇವೆ ಎಂದು ಇಲ್ಲಿ ಬಂದಿದೆ. 'ಸಿ' ಮಾದರಿಯವರು ಕೇವಲ 16 ಜನ ಇರುವುದರಿಂದ, ಇನ್ನುಳಿದವರು ಬಂಗ್ಲೆ ಮಾದರಿ ವಸತಿ ಗೃಹಗಳು 44 ಮತ್ತು ಡ್ಯೂಪ್ಲೆಕ್ಸ್ ಮಾದರಿ ವಸತಿ ಗೃಹಗಳು 40 ಒಟ್ಟು 84 ಇರುವುದರಿಂದ ಈ 16 ಜನರಿಗೆ ಕಡಿಮೆಯಾಗುತ್ತದೆ ಎನ್ನುವ ಪ್ರಶ್ನೆ ಇದೆ. ಆ ಎಲ್ಲಾ ಗೃಹಗಳ

ಸಂಘದ ಸದಸ್ಯರು ಸೇರಿ ಈ ತೀರ್ಮಾನಕ್ಕೆ ಬಂದಿದ್ದಾರೆ. ಇದನ್ನು ತಪ್ಪಿಸಬೇಕಾದರೆ ಮೋಟರುಗಳನ್ನು ಹಚ್ಚಬೇಕಾಗುತ್ತದೆ. ಮೋಟರ್ ಹಚ್ಚುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುತಕ್ಕ ವಿಚಾರದಲ್ಲಿದ್ದೇವೆ. ಆದರೆ ತೀವ್ರಗತಿಯಿಂದ ಈ ರೀತಿ ಅನ್ಯಾಯ ಆಗದೆ ಬಳಸುವ ನೀರಿನ ಪ್ರಮಾಣದ ಮೇಲೆ ಹಣ ವಸೂಲು ಮಾಡುವಂಥ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ಇಲ್ಲಿ ಮೊದಲನೇ ಲಿಸ್ಟ್‌ನಲ್ಲಿ 'ಸಿ' ಮಾದರಿಯ ವಸತಿ ಗೃಹಗಳಲ್ಲಿ 152 ಜನ ಇದ್ದಾರೆ. 152 ಗೃಹಗಳಿವೆ. ಆಮೇಲೆ 95-96ನೇ ಸಾಲಿನಲ್ಲಿ

ಶ್ರೀ ಯು.ಬಿ. ಬಣಕಾರ್:– ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯಲ್ಲಿ 349 ಮನೆಗಳನ್ನು ಕಟ್ಟಿಸಲಾಗಿದ್ದು ಅವುಗಳಲ್ಲಿ 100 ಮನೆಗಳನ್ನು ದುರಸ್ತಿ ಮಾಡಿ ವಾಸಕ್ಕೆ ಯೋಗ್ಯ ಮಾಡಲಾಗಿದೆ. ಮನೆಗಳನ್ನು ಯಾವರೀತಿ ಕಟ್ಟಲಾಗಿದೆ ಎಂಬುದು ಅವರು ಕೊಟ್ಟಿರುವ ಉತ್ತರದಿಂದ ಗೊತ್ತಾಗುತ್ತದೆ. ಅವರು ಮೂರು, ನಮೂನೆಯ ಮನೆಗಳನ್ನು ಕಟ್ಟಿದ್ದಾರೆ. ಆದರೆ ಪ್ರತಿ ಮೂರು ನಮೂನೆಯ ಮನೆಗಳಿಗೂ ಕೂಡ ಒಂದೇ ರೀತಿಯ ದರವನ್ನು ವಿಧಿಸುತ್ತಿದ್ದಾರೆ. ಪ್ರತಿಯೊಂದು ವಸತಿಗೃಹಕ್ಕೆ ಅವರು ಬಳಸುವ ನೀರಿಗೆ ತಕ್ಕಂತೆ ಒಂದು ಮೋಟರನ್ನು ಅಳವಡಿಸಿ ಪ್ರತಿಯೊಂದು ಮನೆಯವರೂ ಅವರು ಬಳಸುವ ನೀರಿನ ಆಧಾರದ ಮೇಲೆ ನೀರಿನ ತೆರಿಗೆಯನ್ನು ವಿಧಿಸುವುದಕ್ಕೆ ಅವರು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಮೂರು ರೀತಿಯ ಗೃಹಗಳಿವೆ. ಒಂದು, ಬಂಗಲೆ ವರ್ಗ, ಇನ್ನೊಂದು ಡ್ಯೂಪ್ಲೆಕ್ಸ್ ಬಂಗ್ಲೆ, ಮತ್ತೊಂದು (ಸಿ) ಮಾದರಿಯ ಗೃಹಗಳು. ಇಲ್ಲೇನಾಗಿದೆ ಎಂದರೆ ಈ ಮೂರೂ ಬೇರೆ ಬೇರೆ ರೀತಿ ಇದ್ದರೂ ಸಹ ಆ ಬಂಗ್ಲೆಯಲ್ಲಿದ್ದಂಥ ವ್ಯಕ್ತಿಗಳು, ಡುಪ್ಲೆಕ್ಸ್ ಬಂಗ್ಲೆಯಲ್ಲಿದ್ದಂಥ 16 ಜನ ಬಂದಿದ್ದಾರೆ. ಒಟ್ಟು 168 ಸಿ ಮಾದರಿಯ ಮನೆಗಳಾಗುತ್ತದೆ. ಆಮೇಲೆ ಪ್ರತಿಯೊಂದಕ್ಕೂ 50 ರೂಪಾಯಿ ಬರುವುದಿಲ್ಲ. ಇಲ್ಲಿ ಹೇಳಬೇಕೆಂದರೆ ಒಂದೊಂದು ಸಿ ಮಾದರಿಯ ಮನೆಗೆ ಒಂದೊಂದು ತಿಂಗಳಿಗೆ ಒಂದೊಂದು ರೀತಿ ಬಿಲ್ ಬರುತ್ತದೆ. ಡಿಸೆಂಬರ್ 96ರಲ್ಲಿ 700 ರೂಪಾಯಿವರೆಗೂ ಬಂದಿದೆ. 50 ರೂಪಾಯಿ ಎಂದು ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಆದ್ದರಿಂದ ಪ್ರತ್ಯೇಕವಾದ ಮೋಟರನ್ನು ಹಾಕುವ ಬಗ್ಗೆ ಗಂಭೀರವಾಗಿ ಪರಿಗಣಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಬಹಳ ಗಂಭೀರವಾಗಿ ವಿಚಾರ ಮಾಡಬೇಕು.

ಶ್ರೀ ಸಿ. ಎಂ. ಉದಾಸಿ:– ಜಗದೀಶ್ ಶೆಟ್ಟರ್ ಅವರು ಅರ್ಥ ಮಾಡಿಕೊಳ್ಳಬೇಕು. ಮೊದಲನೇ ಪ್ಯಾರಾದಲ್ಲಿ ಬಂದಿರುವುದು ಒಟ್ಟು 349 ಮನೆಗಳು. ನಿರ್ಮಾಣವಾಗಿರುವಂಥ ಮನೆಗಳು 349. 'ಸಿ' ಮಾದರಿಯ ಮನೆಗಳು ಅದರಲ್ಲಿ 152. ಅದರಲ್ಲಿ ವಾಸಕ್ಕೆ ಯೋಗ್ಯವಾಗಿರುವುದು ಕೇವಲ 16 ಎಂದು ನಾನು ಹೇಳಿದ್ದೇನೆ ಕೇವಲ 100 ಮನೆಗಳನ್ನು

ಮಾತ್ರ ಈಗ ಕೊಟ್ಟಿದ್ದೇವೆ. ಇನ್ನುಳಿದವುಗಳನ್ನು ದುರಸ್ತಿ ಮಾಡುತ್ತಿದ್ದೇವೆ. ಉಳಿದವೆಲ್ಲಾ ಖಾಲಿ ಇವೆ. ಅದಕ್ಕೆ ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿದ್ದೇನೆ. ಈಗ ಸರಾಸರಿ ದರವನ್ನು 50ರಿಂದ 60 ರೂಪಾಯಿಗಳವರೆಗೆ ವಸೂಲು ಮಾಡುತ್ತಿದ್ದೇವೆ. ವರ್ಷದಲ್ಲಿ ಯಾವುದಾದರೂ ಒಂದು ತಿಂಗಳಲ್ಲಿ ನೀರು ಹೆಚ್ಚು ಬಳಸಿದ ಬಗ್ಗೆ ಬೆಲೆ ಬಂದಿರಬಹುದೋ ಏನೋ. ಆದರೆ ಸರಾಸರಿ 50ರಿಂದ 60 ರೂಪಾಯಿ ವಸೂಲು ಮಾಡುತ್ತಿರುವುದನ್ನು ವರ್ಷದ ಲೆಕ್ಕದಲ್ಲಿ ನಾವು ಹೇಳುತ್ತಿದ್ದೇವೆ. ತಾವು ಹೇಳಿರುವ ಸಮಸ್ಯೆಗೆ ಪರಿಹಾರ ಅಂದರೆ ಮೀಟರ್‌ಗಳನ್ನು ಹಚ್ಚುವುದು. ಅದಕ್ಕೆ ತೀವ್ರವಾಗಿ ಮೀಟರ್ ಹಚ್ಚುವಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಸರಾಸರಿ 100 ರೂಪಾಯಿ ಮೇಲೆ ಬರುತ್ತಿದೆ. 50 ರೂಪಾಯಿ ಎಂದು ಹೇಳುವುದು ಸರಿಯಲ್ಲ.

ಉಪಾಧ್ಯಕ್ಷರು:- ಆಯಿತು. ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಈಗ ಸಭೆಯನ್ನು ಮುಂದೂಡಲಾಗಿದೆ. ಪುನ: ಒಂದು ಗಂಟೆ ನಂತರ ಸಮಾವೇಶ ಗೊಳ್ಳುತ್ತದೆ.

(ಸಭೆಯನ್ನು 1 ಗಂಟೆ 10 ನಿಮಿಷಕ್ಕೆ ಮುಂದೂಡಿ ಪುನ: 2 ಗಂಟೆ 10 ನಿಮಿಷಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು.)